SRI H. M. CHANNABASAPPA.—It is not a fact. Ladies are more anxious to come and have operations and sterilizations than men because it is they who have got to bear the burden of children.

ಶ್ರೀ ಟಿ. ಆರ್. ಶಾಮಣ್ಣ.—ವಾತಾವರಣ ಬದಲಾವಣೆ ಆಗಿರುವಾಗ ಫ್ಯಾಮಿಲ ಪ್ಲಾನಿಂಗನ್ನು ಬಲವಂತವಾಗಿ ಮಾಡದೇ, ಕಡ್ಡಾಯವಾಗಿ ಮಾಡದೇ, ಇದನ್ನು ಯಶಸ್ವಿಯಾಗಿ ನಡೆಸುವುದಕ್ಕೆ ಕಾರ್ಯಕ್ರಮವನ್ನೇನಾದರೂ ಹಾಕಿಕೊಂಡಿದ್ದೀರಾ? ನಿಯಮಾವಳಿಯನ್ನೇನಾದರೂ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಾತಾವರಣವೇನೂ ಬದಲಾವಣೆ ಆಗಿಲ್ಲ.

ಶ್ರೀಮತಿ ದಮಯಂತಿ ಬೋರೇಗಾಂವ.—ಈ ಬಗ್ಗೆ ನಿಗದಿಯಾದ ಗುರಿಗಿಂತ ಹೆಚ್ಚಿನ ಆಪರೇಷನ್ ಮಾಡಿದಂತಹ ಜಿಲ್ಲೆಗೂ ಮತ್ತು ತಾಲ್ಲೂಕಿಗೂ ತಮ್ಮ ಇಲಾಖೆಯ ವತಿಯಿಂದ ಹೆಚ್ಚಿನ ಸೌಕರ್ಯವನ್ನು ಒದಗಿಸಿಕೊಟ್ಟಿದ್ದೀರಿ. ನಮ್ಮ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಸಹ ನಿಗದಿಯಾದ ಗುರಿಗಿಂತ ಹೆಚ್ಚಿನ ಆಪರೇಷನ್ ಮಾಡಿದ್ದಾರೆ. ಅಲ್ಲಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಸೌಕರ್ಯವಿಲ್ಲ. ಅದ್ದರಿಂದ ಅಲ್ಲಿ ಈ ಒಂದು ಹೆಚ್ಚಿನ ಸಾಕರ್ಯವನ್ನು ಒದಗಿಸಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಡಾಕ್ಟರ್‌ಗಳು ಏನೇನು ಅಗತ್ಯವಾದ ಸೌಲಭ್ಯಗಳು ಬೇಕು ಎಂದು ಕೇಳುತ್ತಾರೋ ಅದೆನ್ನೆಲ್ಲಾ ಒದಗಿಸಿಕೊಡುತ್ತಿದ್ದೇವೆ.

ಶ್ರೀ ಎ. ಎಂ. ಘಾಡಿ.—ತಾವು ಇಷ್ಟು ಆಪರೇಷನ್ಸ್ ಮಾಡಬೇಕು ಎಂದು ಆಫೀಸರ್‌ಗಳಿಗೆ ಟಾರ್ಜೆಟ್ ಹಾಕಿದ್ದೀರಿ. ಆದರೆ ನನ್ನ ಕ್ಷೇತ್ರದಲ್ಲಿ ನನ್ನ ಗಮನಕ್ಕೆ ಬಂದಿದೆ, ಜನರು ಇದಕ್ಕೆ ಮುಂದೆ ಬರುತ್ತಿಲ್ಲ. ಜನರು ಮುಂದೆ ಬರದೇ ಇದ್ದುದರಿಂದ ನೀವು ಏನು ಟಾರ್ಜೆಟ್ ಹಾಕುತ್ತೀರಿ ಅದನ್ನು ಪೂರ್ತೈಸಲು ಅಧಿಕಾರಿಗಳಿಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಬೇರೆ ಏನಾದರೂ ನಿಯಮ ಮಾಡಿ ಕುಟುಂಬಯೋಜನೆ ಯಶಸ್ವಿಗೆ ಪ್ರಯತ್ನ ಮಾಡುತ್ತೀರಾ?

ಶ್ರೀ. ಎಚ್. ಎಂ. ಚನ್ನಬಸಪ್ಪ.—ಜನಸಾಮಾನ್ಯರಲ್ಲಿ ತಿಳುವಳಿಕೆ ಹೆಚ್ಚಾಗಿ ಸಣ್ಣ ಸಂಸಾರದಿಂದ ತುಂಬಾ ಪ್ರಯೋಜನವಾಗುತ್ತದೆ ಎಂಬ ಅಭಿಪ್ರಾಯ ಜನರಲ್ಲಿ ಮೂಡುವಂತೆ ಮಾಡಲು ನಾವು ನೀವು ಎಲ್ಲರೂ ಕೂಡ ಕಾರ್ಯಕ್ರಮ ತೆಗೆದುಕೊಳ್ಳುವುದೊಂದೇ ಮಾರ್ಗ ಇರುವುದು.

Filling up the posts by public undertakings or Government Department undertakings.

181 SRI K. SIDDAIAH (Santhemaranahalli).—Will the Chief Minister be pleased to state:—

(*a*) the directions issued by the Government prescribing penalties for the irregularities committed by non-officials in the matter of recruitment, promotions, appointments, in public undertakings ; departmental undertakings ; if so what are they ;

(*b*) whether there are any Officers to inspect and report to Government the above irregularities or illegalities ;

(*c*) if not, whether Government intend to appoint Officers to inspect and report to Government about the irregularities in the matter of recruitment, appointments and promotions ;

(*d*) whether it has been made obligatory or compulsory on the authorities to get the list of candidates from the Employment Exchange and select suitable candidate for appointment ;

(*e*) if not, whether Government intend to issue suitable directions to all Public Undertakings to obtain lists from the Employment Exchange and select candidates from that lists alone ?

SRI H. M. CHANNABASAPPA.--(Minister for Heath) [On behalf of SRI D DEVARAJ URS (Chief Minister)].—

(*a*) No such directions prescribing penalties have been issued.

(*b*) and (c) Nominees of the Government on the Board of Directors of Companies/Corporations are required to safe guard the interests of the State Government and to ensure that the policies of Government are respected Such Nominees report to Government on the functioning of the Companies/Corporations and this aspect is also borne in mind.

(*d*) and (*e*) It is obligatory on every establishment in Public Sector in the State to notify vacancies occuring in the establishment to the Employment Exchange. unless the vacancies come under exempted category, before filling up a vacancy. This does not however impose any obligation upon the employer to necessarily recruit a person through the Employment Exchange to fill a vacancy merely because the vacancy has been notified to the Exchange. A directive has been issued to all Public Sector Undertakings to notify vacancies occuring in their Establishment to the Employment Exchange.

Government have also directed that the Secretaries to Government shall in pursuance of the provisions made in Articles of the Association of all Companies whether fully owned or partially owned by the State Government with which they are concerned, issue directions to the companies to make reservations in favour of Scheduled Caste/Scheduled Tribes and other Backward Classes and that so far as the Institutions receiving grants from Government are concerned, one of the conditions for sanction of the grant should be that the Institution receiving grants should necessarily employ the same percentage of persons belonging to Scheduled Caste, Scheduled Tribes and other Backward Classes and the Authorities sanctioning or renewing such grant shall take this aspect of the matter into consideration while renewing or sanctioning grant for any year. So far as Statutory Boards, Corporations, or Institutions are concerned, Secretaries to Government are requested to scrutinise the Acts constituting the Institutions with a view to making provisions in them to make reservations for Scheduled Caste and Scheduled Tribes and other Backward Classes.

Revised Orders have been issued in March 1977 regarding classification of Backward Classes for purposes of reservation of appointments and posts under Article 16(4) of the Constitution The Secretary to Government have been requested to issue revised directions to the Companies, Boards, etc, to follow the provisions of the revised Orders so far as reservations are concerned,

ಶ್ರೀ ಕೆ. ಸಿದ್ದಯ್ಯ.—ಸ್ವಾಮಿ ನಾನು ನನ್ನ ಪ್ರಶ್ನೆಯ ಮೊದಲನೇ ಭಾಗದಲ್ಲಿ "the directions issued by the Government prescribing penalties for the irregularities committed by non-officials in the matter of recruitment, promotions, appointments, in public undertaking : departmental undertakings ; if so what are they ;" ಎಂದು ಕೇಳಿದ್ದೇನೆ. ಅದಕ್ಕೆ ತಾವು "No such directions prescribing penalties have been issued" ಎಂದು ಹೇಳಿದ್ದೀರಿ ಇಷ್ಯೂ ಮಾಡದೇ ಇರುವುದಕ್ಕೆ ಕಾರಣ ಏನು ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ರೆಕ್ರೂಟ್‌ಮೆಂಟ್ ಮಾಡತಕ್ಕ ವಿಷಯದಲ್ಲಿ ನಾನಾ ಅಫಿಷಿಯಲ್ಸ್ ಮೇಲೆ ದಂಡವನ್ನು ವಿಧಿಸತಕ್ಕದ್ದು ಸಾಧುವಾದುದಲ್ಲ ಎಂದು ನಾವು ಹಾಗೆ ಮಾಡಿಲ್ಲ.

ಶ್ರೀ ಕೆ. ಸಿದ್ದಯ್ಯ.—ತಾವು ಡೈರೆಕ್ಷನ್ಸ್ ಇಷ್ಯೂ ಮಾಡಿಲ್ಲ ಎಂದು ಹೇಳಿದ್ದೀರಿ. ಸರ್ಕಾರೇತರ ಸಂಸ್ಥೆಗಳವರು ರೆಕ್ರೂಟ್‌ಮೆಂಟ್ ವಿಷಯದಲ್ಲಿ ಮಯಲೆಟ್ ಮಾಡಿದರೆ ಅಂತಹವರಿಗೆ ಪೆನಾಲ್ಟಿ ವಿಧಿಸುವುದಕ್ಕೆ ಡೈರೆಕ್ಷನ್ಸ್ ಇಷ್ಯೂ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಂಪ್ಲಾಯ್ ಮಾಡತಕ್ಕವರ ಯೋಗ್ಯತಾ ಯೋಗ್ಯತೆಗಳನ್ನು ಪರೀಕ್ಷೆ ಮಾಡಿ ಅದರ ಪ್ರಕಾರ ಮಾಡಬೇಕಾಗಿ ಬರುತ್ತದೆ. ತಮ್ಮ ಸಂಸ್ಥೆಯಲ್ಲಿ ಖಾಲಿ ಯಾಗುವ ಹುದ್ದೆಗಳನ್ನು ಉದ್ಯೋಗ ವಿನಿಮಯ ಕೇಂದ್ರಕ್ಕೆ ಸೂಚಿಸುವಂತೆ ಎಲ್ಲ ಸಾರ್ವಜನಿಕ ಉದ್ಯಮಗಳಿಗೆ ಆದೇಶ ನೀಡಲಾಗಿದೆ ಎಂದು ಮುಂದಿನ ಪ್ರಶ್ನೆಗೆ ಉತ್ತರದಲ್ಲಿ ಹೇಳಿದ್ದೇವೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಕಳಿಸಿದವರನ್ನೆಲ್ಲಾ ಅಪಾಯಿಂಟ್ ಮಾಡಬೇಕು. ಎಂಬ ಪ್ರಶ್ನೆ ಬರುವುದಿಲ್ಲ. ಮತ್ತು ಅನುಸೂಚಿತ ಜಾತಿ, ಅನುಸೂಚಿತ ಆದಿಮ ಜಾತಿ ಹಾಗು ಹಿಂದುಳಿದ ವರ್ಗದವರಿಗೆ ಹುದ್ದೆಗಳನ್ನು ಮೀಸಲಾಗಿಟ್ಟಿದ್ದಾರೆ ಅಂತಹ ಹುದ್ದೆಗಳಿಗೆ ಅವರನ್ನು ಗ್ಯಾರಂಟಿ ಯಾಗಿ ನೇಮಕ ಮಾಡುವಂತೆ ಕಡ್ಡಾಯವಾಗಿ ಆದೇಶ ಕೊಟ್ಟಿದ್ದೇವೆ ಎಂದು ಹೇಳಿದ್ದೇನೆ.

ಶ್ರೀ ಕೆ. ಸಿದ್ದಯ್ಯ.—ನಾನು ಆ ಬಗ್ಗೆ ಕೇಳುತ್ತಿಲ್ಲ. ರಾಜ್ಯ ರೆಗ್ಯುಲೇಷನ್ ಏನಿದೆ ಅದರಂತೆ ಮಾಡನೇಹೋದರೆ ಅಂತಹವರಿಗೆ ಪೆನಾಲ್ಟಿ ಹಾಕುವುದಕ್ಕೆ ಡೈರೆಕ್ಷನ್ ಕೊಟ್ಟಿದ್ದೀರಾ ಎಂದು ಕೇಳುತ್ತಿದ್ದೇನೆ. ತಾವು ಇಲ್ಲ ಎಂದು ಹೇಳಿದ್ದೀರಿ. ಯಾತಕ್ಕೋಸ್ಕರ ಡೈರೆಕ್ಷನ್ ಕೊಡ ಬಾರದು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಂದವರನ್ನೆಲ್ಲಾ ಅಪಾಯಿಂಟ್ ಮಾಡಿಕೊಳ್ಳಬೇಕು ಎಂಬ ಕಡ್ಡಾಯವಿಲ್ಲದೇ ಇರುವುದರಿಂದ ಆ ರೀತಿ ಡೈರೆಕ್ಷನ್ ಕೊಡುವುದು ಕಷ್ಟ.

ಶ್ರೀ ಕೆ. ಸಿದ್ದಯ್ಯ — ನಾನು ಪ್ರಶ್ನೆ ಕೇಳುತ್ತಿರುವುದೇ ಬೇರೆ, ಇವರು ಉತ್ತರ ಕೊಡುತ್ತಿರುವುದೇ ಬೇರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಪ್ರಶ್ನೆಯ ಮೂಲವುದ್ದೇಶವನ್ನೇ ಅರ್ಥ ಮಾಡಿಕೊಂಡಿಲ್ಲ. ರಾಜ್ಯದಲ್ಲಿ ಅನೇಕ ಬೋರ್ಡ್‌ಗಳು, ಕಾರ್ಪೊರೇಷನ್‌ಗಳು, ಸಾರ್ವಜನಿಕ ಉದ್ಯಮಗಳು ಇವೆ. ಅಲ್ಲದೆ ಸರ್ಕಾರಿ ಉದ್ಯಮಗಳೂ ಇವೆ. ಕಂಪೆನಿಗಳಲ್ಲಿ ಶೇಕಡ 18 ಭಾಗ ಹುದ್ದೆಯನ್ನು ಪರಿಶಿಷ್ಟ ವರ್ಗದವರಿಗೆ ಕೊಡಬೇಕು ಎಂದು ಸೂಚನೆ ಇತ್ತಿದ್ದೀರಿ, ಅದು ಬಹಳ ಸಂತೋಷ. ಆದರೆ ಅಲ್ಲಿ ಆ ನಿಯಮವು ಕಾರ್ಯಗತವಾಗ ದೇಹೋದರೆ ಅದನ್ನು ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿ ಮಾಡುವುದಕ್ಕೆ ಏನಾದರೂ

ಏರ್ಪಾಡು ಮಾಡಿದ್ದೀರಾ ? ಸಮಾಜ ಕಲ್ಯಾಣ ಇಲಾಖೆಯವರು ಆ ರೀತಿ ತನಿಕೆ ಮಾಡುವುದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಆದ್ದರಿಂದ ತಾವು ಆ ರೀತಿ ಏನಾದರೂ ವ್ಯವಸ್ಥೆ ಮಾಡುತ್ತೀರಾ ಸ್ವಾಮಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಮ್ಮಲ್ಲೂ ಸರ್ಕಾರೀ ರೆಪ್ರಸೆಂಟೇಟೀವ್ಸ್ ಇದ್ದಾರೆ. ಅವರು ಇದರ ಬಗ್ಗೆ ನೋಡಿಕೊಳ್ಳುತ್ತಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್ —ನೀವು ನೀಡತಕ್ಕ ನೂಚನೆ ಕಾರ್ಯಗತ ವಾಗಿದೆಯೇ ಇಲ್ಲವೇ ಎಂಬುದನ್ನು ಫಾಲೋ ಮಾಡುತ್ತೀರೋ ಇಲ್ಲವೋ ಎಂದು ಕೇಳಿದರೆ ಅದಕ್ಕೆ ತಾವು ಉತ್ತರವೇ ಕೊಡುತ್ತಿಲ್ಲ What are the directions ? Has it been properly implemented or not ? Will you kindly furnish the statistics ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನಾ ತೆರಹದ ಹುದ್ದೆಗಳಿರುತ್ತವೆ. ಕೆಲವು ಟಿಕ್ಕಿಕರ್ ಹುದ್ದೆಗಳಿರುತ್ತವೆ. ಇದರಲ್ಲಿ ಆ ವರ್ಗದವರು ಸಾಕಷ್ಟು ಜನ ಸಿಗಬಹುದು ಅಥವಾ ಸಿಗದೇ ಇರಬಹುದು ಅದನ್ನು ಕೇಳುವುದಕ್ಕಾಗುವುದಿಲ್ಲ. ಒಟ್ಟಿನಲ್ಲಿ ಸರ್ಕಾರದಿಂದ ಸಹಾಯ ಪಡೆಯತಕ್ಕ ಎಲ್ಲ ಉದ್ದಿಮೆಗಳಲ್ಲಿ ಸರ್ಕಾರದವರು ನಿಗದಿ ಮಾಡಿರತಕ್ಕ ಪರ್ಸಂಟೇಜನಷ್ಟು ಪರಿಶಿಷ್ಟ ವರ್ಗದ ಜನರನ್ನು ತೆಗೆದುಕೊಳ್ಳುವಂತೆ

ಶ್ರೀ ಎಂ. ಎಚ್ ಜಯಪ್ರಕಾಶ್ ನಾರಾಯಣ್.—ನಾನು ಆ ವಿಷಯ ಕೇಳುತ್ತಿಲ್ಲ. ನಮ್ಮ ಆದೇಶವನ್ನೇ ಪಾಲಿಸದೇ ತಪ್ಪು ಮಾಡಿದರೆ ಅಂಥವರಿಗೆ ಏನಾದರೂ ಶಿಕ್ಷೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ ಎಂದು ನಾನು ಕೇಳುತ್ತಿರುವುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ನಾನು ಹೇಳುತ್ತಿದ್ದೇನೆ, ನಮ್ಮ ರೆಪ್ರಸೆಂಟೇಟೀವ್ಸ್ ಅದನ್ನು ವರದಿ ಮಾಡುತ್ತಾರೆ. ಆಗ ಪರಿಶೀಲನೆ ಮಾಡಿ ನಿಯಮದ ಪ್ರಕಾರ ಅಪಾಯಿಂಟ್‌ಮೆಂಟ್ ಮಾಡದೇ ಇದ್ದರೆ ಆ ರೀತಿ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಕೆ. ಸಿದ್ದಯ್ಯ.—ನೀವು ಕೊಟ್ಟಿರುವ ಆದೇಶವನ್ನು ವಯಲೆಟ್ ಮಾಡಿದರೆ ದಂಡ ವಿಧಿಸುವ ಏರ್ಪಾಟು ಮಾಡಿದ್ದೀರಾ? ನೀವು ಆರೀತಿ ಮಾಡದಿದ್ದರೆ ಮುಂದೆಯಾದರೂ ಮಾಡುತ್ತೀರಾ ಎಂಬುದನ್ನಾದರೂ ಹೇಳಿ

ಶ್ರೀ ಎಚ್. ಎಂ ಚನ್ನಬಸಪ್ಪ.—ಸರ್ಕಾರದಿಂದ ನೇರವಾಗಿ ಹಣೋಟಿ ಪಡೆದಿರತಕ್ಕ ಕಂಪನಿ ಗಳಲ್ಲಿ ಈ ಬಗ್ಗೆ ಖುದ್ದಾಗಿ ಪರಿಶೀಲನೆ ಮಾಡಲಾಗುತ್ತದೆ. ಸರ್ಕಾರದ ಹಣೋಟಿ ಇಲ್ಲದೇ ಇರತಕ್ಕ ಕೆಲವು ಉದ್ದಿಮೆಗಳಿವೆ. We use our good offices to see that those directions are, as far as possible implemented, in such undertakings.

ಶ್ರೀ ಸಿ. ಬೈರೇಗೌಡ.—ಸ್ವಾಮಿ, ತಾವು ತಮ್ಮ ಇಲಾಖೆಯ ಅಧಿಕಾರಿಗಳು ಅಲ್ಲಿರುತ್ತಾರೆ, ಅವರು ಸರ್ಕಾರಕ್ಕೆ ವರದಿ ಮಾಡುತ್ತಾರೆ ಎಂದು ಹೇಳಿದ್ದೀರಿ ಆ ವರದಿ ಪ್ರಕಾರ ಎಷ್ಟು ನಂದರ್ಭ ಗಳಲ್ಲಿ ತಮ್ಮ ನಿರ್ದೇಶನವನ್ನು ವಯಲೆಟ್ ಮಾಡಿದ್ದಾರೆ ಎಂಬುದನ್ನು ತಿಳಿಸುವುದಕ್ಕಾಗುತ್ತದೆಯೇ ಮತ್ತು ಸರ್ಕಾರಕ್ಕೆ ವರದಿ ಕಳಿಸಿದಮೇಲೆ ತಾವು ತೆಗೆದುಕೊಳ್ಳತಕ್ಕ ಕ್ರಮ ಏನು ?

ಶ್ರೀ ಎಚ್ ಎಂ. ಚನ್ನಬಸಪ್ಪ.—ನೂರಾರು ನಂಸ್ಥೆಗಳಿರುತ್ತವೆ. ಯಾವಯಾವುದರಲ್ಲಿ ಏನೇನು ನಡೆದಿದೆ ಎಂದು ಹೇಳುವುದಕ್ಕಾಗುವುದಿಲ್ಲ ಬೇರೆ ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ.—ಇದಕ್ಕೆ ಬೇರೆ ಪ್ರಶ್ನೆ ಬೇಕಾಗಿಲ್ಲ. ಈಗ ಉತ್ತರ ಸಿಗದಿದ್ದರೆ ಈ ಪ್ರಶ್ನೆ ವಿಥೆರ್ಡ್ ಮಾಡಿಸಿ ಇನ್ನೊಂದು ಸಾರಿ ಉತ್ತರ ಕೊಡಿ.

ಅಧ್ಯಕ್ಷರು.—ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಸಿದ್ದಯ್ಯ.—ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಿಂದ ಲಸ್ಟ್ ತರಿಸಿಕೊಂಡು ಅದರಂತೆ ಹುದ್ದೆಗಳನ್ನು ಭರ್ತಿ ಮಾಡಬೇಕೆಂದು ನಿಯಮ ಇದೆ. ಹಾಗೆ ಮಾಡದೇ ಇದ್ದರೆ 500 ರೂಪಾಯಿ ಗಳವರೆಗೆ ದಂಡ ವಿಧಿಸಬಹುದು ಎಂದು ಸರ್ಕಾರದ ನರಕ್ಯುಲರ್ ಇದೆ. ಆದ್ದರಿಂದ ತಾವು ಆ ರೀತಿ ಮಾಡದೇ ಇರುವ ಕಡೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಉದಾಹರಣೆಗೆ ರಸ್ತೆ ನಾರಿಗೆ ಕಂಸ್ಟ್ರಿಯಲ್ಲಿ ಉಪ್ಯೋಗ ವಿನಿಮಯ ಕಚೇರಿಯಿಂದ ಲಸ್ಟ್ ತರಿಸಿ ಅಪಾಯಿಂಟ್ ಮಾಡುತ್ತಿಲ್ಲ. ಅಂಥ ನಮಯದಲ್ಲಿ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ಉತ್ತರದಲ್ಲಿ ಹೇಳಿದ್ದೇನೆ ಒಂದೊಂದು ತರಹದ ಕೆಲಸಕ್ಕೆ ಒಂದೊಂದು ರೀತಿಯ ಜನ ಬೇಕಾಗುತ್ತದೆ. ಪರಿಶಿಷ್ಟ ವರ್ಗದವರನ್ನೇ ಅಪಾಯಿಂಟ್ ಮಾಡಬೇಕು ಎಂದು ಹೇಳಿದರೂ ಕೂಡ ಆ ಹುದ್ದೆಗೆ ಬೇಕಾದ ಸರಿಯಾದ ಕ್ವಾಲಿಫಿಕೇಷನ್ ಇರುವಂಥ ಅಭ್ಯರ್ಥಿಗಳು ಸಿಗದೇ ಇರುವ ಕಾಲದಲ್ಲಿ ಅವರು ಬೇರೆಯವರನ್ನು ಅಪಾಯಿಂಟ್ ಮಾಡಿಕೊಂಡಾಗ ನಾವು ಅವರನ್ನು ಆ ರೀತಿ ಯಾತಕ್ಕೆ ಮಾಡಿದಿರಿ ಎಂದು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಸಿ. ಭೈರೇಗೌಡ.—ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ವೆಲ್‌ಫೇರ್ ಕಮಿಟಿ ಎಂದು ನಮ್ಮ ಈ ಸದನದ ಈ ಒಂದು ಸಮಿತಿ ಇದೆ. ಆ ಸಮಿತಿಯು ವರದಿ ಮಾಡಿದ ಪ್ರಕಾರ ಸರ್ಕಾರ ತೆಗೆದುಕೊಂಡ ಕಾರ್ಯಕ್ರಮ ಏನು ?

9-30 A. M,

ಶ್ರೀ ಹೆಚ್. ಎಂ. ಚನ್ನಬಸಪ್ಪ.—ವಿಚಾರ ಮಾಡುತ್ತೇನೆ.

ಶ್ರೀ ಕೆ. ಸಿದ್ದಯ್ಯ.—ಇದರ ಬಗ್ಗೆ ಇರ್ರೆಗ್ಯುಲಾರಿಟೀಸ್ ಇದ್ದರೆ ಸರ್ಕಾರದವರಿಂದ ನಾವು ನಿರ್ದೇಶನ ಹೊಂದಿದವರು ತಕ್ಕ ಕ್ರಮ ತೆಗೆದುಕೊಳ್ಳುವಂತೆ ಸರ್ಕಾರಕ್ಕೆ ತಿಳಿಸುತ್ತಾರೆಂದು ಹೇಳಿದ್ದೀರಿ. ಕೆ. ಎಸ್. ಆರ್. ಟಿ. ಸಿ. ಯಲ್ಲಿ ಒಬ್ಬರು ಕಾರ್ಯದರ್ಶಿಗಳು ಮತ್ತು ಮೂವರು ಜಂಟಿ ಕಾರ್ಯದರ್ಶಿಗಳು ಇದ್ದಾರೆ. ನಾನು ಅಲ್ಲಿ ಬೋರ್ಡ್ ಮೆಂಬರ್ ಆಗಿದ್ದಾಗ ಕೆಲವು ಇರ್ರೆಗ್ಯುಲಾರಿಟೀಸ್ ನಡೆದವು. ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ತಾವು ನಿರ್ದಿಷ್ಟವಾದ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದೀರಿ. ಆ ಬಗ್ಗೆ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳುತ್ತದೆ.

ಶ್ರೀ ಹೆಚ್. ಎನ್. ನಂಜೇಗೌಡ.—ಈಗತಾನೇ ಮಾನ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದರು, ಸರ್ಕಾರ ಏನು ಕ್ರಮ ಕೈಗೊಳ್ಳಲಿಕ್ಕೆ ಆಗುವುದಿಲ್ಲವೆಂದು. ಪಬ್ಲಿಕ್ ಅಂಡರ್‌ಟೇಕಿಂಗ್ ಇನ್ಸ್ಟಿಟ್ಯೂಷನ್‌ಗಳು ಯಾವುವು ಇರುತ್ತವೆ ಅವುಗಳಿಗೆ ಸರ್ಕಾರವೇ ನೇರವಾಗಿ ಹಣ ಕೊಡಗಿಸಿ (ಎಲ್ಲಿ ಬಂಡವಾಳವನ್ನು ಹೂಡಿ) ಅವುಗಳು ಸರ್ಕಾರದ ಹುಕುಮನ್ನು ಪಾಲಿಸದೆ ಇದ್ದರೆ ಏನೂ ಕ್ರಮ ಕೈಗೊಳ್ಳುವುದಕ್ಕೆ ಆಗುವುದಿಲ್ಲವೆಂದರೆ ಹೇಗೆ ?

ಶ್ರೀ ಹೆಚ್. ಎಂ. ಚನ್ನಬಸಪ್ಪ.—ನಾನು ಹಾಗೆ ಹೇಳಲಿಲ್ಲ.

ಶ್ರೀ ಹೆಚ್. ಎನ್. ನಂಜೇಗೌಡ.—ಹೇಳಲಿಲ್ಲ ಎಂದರೆ ಸರಿ.

ಶ್ರೀ ಹೆಚ್. ಎಂ ಚನ್ನಬಸಪ್ಪ.—ಕೆಲವು ಕೆಲಸಗಳಿಗೆ ಕೆಲವು ರೀತಿಯ ತರಬೇತಿ ಬೇಕಾಗುತ್ತದೆ. ಟೆಕ್ನಿಕಲ್ ವರ್ಕ್ಸ್‌ಗೆ ಟೆಕ್ನಿಕಲ್ ಕ್ವಾಲಿಫೈಡ್ ಇರತಕ್ಕವರು ಬೇಕಾಗುತ್ತದೆ ಕೆಲವಕ್ಕೆ ಸಾಧಾರಣವಾದ ಜನರಲ್ ಎಜುಕೇಷನ್ ಬೇಕಾಗುತ್ತದೆ. ಕೆಲವಕ್ಕೆ ಟೆಕ್ನಿಕಲ್ ಕ್ವಾಲಿಫೈಡ್ ಮತ್ತು ತರಬೇತಿಯು ಸಹ ಬೇಕಾಗುತ್ತದೆ.

SRI ABDUL KHUDDUS ANWAR.—We have got technically qualified people. Complaints have been given that though competent people with qualifications are there they are not being absorbed. Are you going to absorb all these people ?

SRI H. M. CHANNABASAPPA —I cannot say I will absorb all the people. If there are vacancies and if there are technical people available, to the extent possible, we will certainly do it

Repairs to Roads in Mandya District

443 SMT. DAMAYANTHI BORE GOWDA (Srirangapatna).—Will the Minister for Public Works be pleased to state —

(a) the expenditure incurred to repair and maintain roads in Mandya District (Talukwise figures may be furnished)